ಕಲ್ಪಿಸಿಕೊಡಬೇಕೆಂದು ನಾವೇ ಇಲಾಖೆಯ ಬೆನ್ನತ್ತಿ 1996-97ರಲ್ಲಿ ಈ ಯೋಜನೆಯನ್ನು ಮಂಜೂರಾತಿ ಮಾಡಿಸಿಕೊಂಡೆವು. ಇದಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದಕ್ಕೆ ನಾಲ್ಕು ವರ್ಷಗಳು ಬೇಕಾಯಿತು. ತಾಂತ್ರಿಕ ಮಂಜೂರಾತಿ ಕೊಟ್ಟ ನಂತರವೂ ಕೂಡ ಇನ್ನೂ ಟೆಂಡರ್ ಕರೆದಿರುವುದಿಲ್ಲ. ಯಾವ ಕಾರಣಕ್ಕಾಗಿ ಟೆಂಡರ್ ಕರೆಯುತ್ತಿಲ್ಲ? ಅಧಿಕಾರಿಗಳಿಗೆ ಕೆಲಸ ಮಾಡುವುದಕ್ಕೆ ಮನಸ್ಸು ಇಲ್ಲವೇ? ಅಥವಾ ತೀರ್ಥಹಳ್ಳಿಯಲ್ಲಿ ಉಪ ಮಾರುಕಟ್ಟೆ ಪ್ರಾಂಗಣ ರಚನೆ ಮಾಡುವಂಥ ಅವಶ್ಯಕತೆಯಿಲ್ಲವೇ? ನಿಮ್ಮ ಇಲಾಖಾಧಿಕಾರಿಗಳಿಗೆ ಈ ಕೆಲಸ ಮಾಡುವುದು ಬಿಟ್ಟು ಬೇರೆ ಏನು ಕೆಲಸವಿದೆಯೆಂಬುದನ್ನು ತಿಳಿಸಬೇಕು.

ಶ್ರೀ ಆರ್. ಬಿ. ತಿಮ್ಮಾಪುರ್ : ಈ ಕೆಲಸವನ್ನು ಒಮ್ಮೆಲೇ ಕೈಗೆತ್ತಿಕೊಂಡು ಒಂದು ವರ್ಷದಲ್ಲಿ ಮುಗಿಸುವಂಥ ಕೆಲಸ ಮಾಡುತ್ತೇನೆ ಮತ್ತು ಕಾಮಗಾರಿ ಇಷ್ಟು ತಡವಾಗಿರುವುದಕ್ಕೆ ಕಾರಣವೇನೆಂಬುದನ್ನು ತನಿಖೆ ಮಾಡಿ ಮಾನ್ಯ ಸದಸ್ಯರಿಗೆ ವಿವರ ಒದಗಿಸಿಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇದಕ್ಕೆ ತಾಂತ್ರಿಕ ಮಂಜೂರಾತಿ ಸಿಕ್ಕಿ 2-3ತಿಂಗಳುಗಳಾದರೂ ಇನ್ನೂ ತೊಂದರೆ ಟೆಂಡರ್ ಕರೆದಿರುವುದಿಲ್ಲ. ಈಗಾಗಲೇ ನಾವು ಮಾರ್ಚಿ ತಿಂಗಳಿನಲ್ಲಿದ್ದು ಇನ್ನು ಎರಡು ತಿಂಗಳೊಳಗಾಗಿ ಕಾಮಗಾರಿಯನ್ನು ಮುಗಿಸಬೇಕಾಗಿದೆ. ಮಳೆಗಾಲ ಪ್ರಾರಂಭವಾದರೆ ಕಾಮಗಾರಿ ಮಾಡುವುದಕ್ಕಾಗುವುದಿಲ್ಲ. ಮೇ ತಿಂಗಳ ಅಂತ್ಯದೊಳಗೆ ಮಳೆಗಾಲ ಪ್ರಾರಂಭವಾಗುತ್ತದಾದ್ದರಿಂದ ಏನೂ ಮಾಡದ ಸ್ಥಿತಿಯಲ್ಲಿ ನಿಸ್ಸಹಾಯಕರಾಗಿ ನಿಮ್ಮ ಇಲಾಖೆಯವರು ಕುಳಿತಿರುವುದರಿಂದ ಆಡಳಿತ ಯಂತ್ರವನ್ನು ಸರಿಪಡಿಸುವಂಥ ವ್ಯವಸ್ಥೆಯನ್ನು ದಯವಿಟ್ಟು ಮಾಡಿಸಬೇಕು.

ಶ್ರೀ ಆರ್. ಬಿ. ತಿಮ್ಮಾಪುರ್ : ಅಲ್ಲಿನ ಪರಿಸ್ಥಿತಿ ಏತಕ್ಕೋಸ್ಕರ ಆ ರೀತಿಯಾಗಿದೆ ಎಂಬ ವಿವರಗಳನ್ನು ತರಿಸಿಕೊಂಡು ತಮಗೆ ಉತ್ತರ ನೀಡುತ್ತೇನೆ.

ರೋಣ ಬೆಂಗಳೂರು ನಡುವೆ ಹೈಟೆಕ್ ಬಸ್ ಸಂಚಾರ

116 (919) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ವಿಭಾಗೀಯ ಕಛೇರಿ ವ್ಯಾಪ್ತಿಗೆ ಬರುವ ಬಸ್ಸುಗಳ ಸಂಖ್ಯೆ ಎಷ್ಟು?

ಆ) ರೋಣ ಡಿಪೋದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು;

ಇ) ಪ್ರಸ್ತುತ ಕ್ಷೇತ್ರ ವ್ಯಾಪ್ತಿ ಜನಸಂಖ್ಯೆ ಆಧರಿಸಿ ಬಸ್ಸುಗಳ ಸಂಖ್ಯೆ ಕಡಿಮೆ ಇದ್ದು ಬಸ್ಸುಗಳನ್ನು ಹೆಚ್ಚಿಸಲು ಸರಕಾರ ಕ್ರಮ ಕೈಗೊಳ್ಳುವುದೇ;

ಈ) ರೋಣದಿಂದ ಬೆಂಗಳೂರಿಗೆ ಹೈಟೆಕ್ ಬಸ್ ಓಡಿಸಲು ಜನರ ಆಗ್ರಹವಿದ್ದು ಈ ಕುರಿತು ಪ್ರಸ್ತಾವನೆ ಕೂಡಾ ಸಲ್ಲಿಸಲಾಗಿದ್ದರೂ ಸಹ ಸರ್ಕಾರವು ಈ ವರೆವಿಗೂ ಹೈಟೆಕ್ ಬಸ್ಸುಗಳನ್ನು ಓಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) 362

ಆ) 87

ಇ) ಪ್ರಸ್ತುತ ರೋಣ ಘಟಕಕ್ಕೆ ನಿಯೋಜಿಸಲಾಗಿರುವ ಬಸ್ಸುಗಳ ಸಂಖ್ಯೆ, ರೋಣ ತಾಲ್ಲೂಕಿನ ಅಗತ್ಯತೆಗೆ ಅನುಸಾರವಾಗಿ ಇರುತ್ತದೆ. ಈ ಕುರಿತು ಇನ್ನೂ ಹೆಚ್ಚಿನ ಬಸ್ಸುಗಳ ಬೇಡಿಕೆ ಕಂಡು ಬಂದಲ್ಲಿ, ರೋಣ ಘಟಕಕ್ಕೆ ಹೆಚ್ಚುವರಿಯಾಗಿ ಬಸ್ಸುಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು.

ಈ) ರೋಣದಿಂದ ಬೆಂಗಳೂರಿಗೆ ಹೈಟೆಕ್ ಬಸ್ ಪ್ರಾರಂಭಿಸಲು ನಾಗರೀಕರಿಂದ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. ಈಗಾಗಲೇ ಬಾಗಲಕೋಟೆ - ಬೆಂಗಳೂರು, ಬಾದಾಮಿ-ಬೆಂಗಳೂರು ಸಾರಿಗೆಗಳು ರೋಣ ಮುಖಾಂತರ ಕಾರ್ಯಾಚರಣೆಗೊಳ್ಳುತ್ತಿದ್ದು, ಪ್ರಯಾಣಿಕರು ಈ ಸಾರಿಗೆಗಳ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ರೋಣದಿಂದ ಬೆಂಗಳೂರಿಗೆ ಹೈಟೆಕ್ ಸಾರಿಗೆಗೆ ಹೆಚ್ಚಿನ ಪ್ರಯಾಣಿಕರು ದೊರೆಯುವ ಸಾಧ್ಯತೆ ಕಂಡು ಬರುವುದಿಲ್ಲ.

ಶ್ರೀ ಜಿ.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಸಚಿವರು ಉತ್ತರಿಸುತ್ತಾ ' ಈ ಕುರಿತು ಇನ್ನೂ ಹೆಚ್ಚಿನ ಬಸ್ಸುಗಳ ಬೇಡಿಕೆ ಕಂಡು ಬಂದಲ್ಲಿ, ರೋಣ ಘಟಕಕ್ಕೆ ಹೆಚ್ಚುವರಿಯಾಗಿ ಬಸ್ಸುಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ಎಂದು ತಿಳಿಸಿದ್ದಾರೆ. ಇದಕ್ಕಾಗಿ ಮಾನ್ಯ ಸಚಿವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಇದರ ಜೊತೆಗೆ ರೋಣದಿಂದ ಬೆಂಗಳೂರಿಗೆ ಹೈಟೆಕ್ ಬಸ್ ಸಂಚಾರ ಪ್ರಾರಂಭಿಸಬೇಕೆಂದು ಸಚಿವರಲ್ಲಿ ಕೇಳಿಕೊಂಡಿದ್ದರೂ ' ಈ ಕುರಿತು ನಾಗರಿಕರಿಂದ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ' ಎಂದಿದ್ದಾರೆ. ಮತ್ತು ' ಈಗಾಗಲೇ ಬಾಗಲಕೋಟೆ- ಬೆಂಗಳೂರು, ಬಾದಾಮಿ- ಬೆಂಗಳೂರು ಸಾರಿಗೆಗಳು ರೋಣ ಮುಖಾಂತರ ಕಾರ್ಯಾಚರಣೆಗೊಳ್ಳುತ್ತಿದ್ದು, ಪ್ರಯಾಣಿಕರು ಈ ಸಾರಿಗೆಗಳ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ಎಂದು ತಿಳಿಸಿದ್ದಾರೆ. ಆದರೆ, ರೋಣದಿಂದ ಇವೊತ್ತು ಬೆಂಗಳೂರಿಗೆ ನೇರವಾಗಿ ರೈಲು ಸಂಚಾರದ ಸೌಲಭ್ಯವಿರದೆ ಬಸ್ಸಿನಲ್ಲಿಯೇ ಬರಬೇಕಾಗಿರುತ್ತದೆ. ಒಮ್ಮೊಮ್ಮೆ ಬಸ್ಸಿನಲ್ಲಿ ಪ್ರಯಾಣಿಸಿದರೂ ಆಸನಗಳು ಖಾಲಿ ಇರುವುದಿಲ್ಲ, ನಿಂತೇ ಪ್ರಯಾಣಿಸಬೇಕಾದ ಅನಾನುಕೂಲ ಪರಿಸ್ಥಿತಿ ಇದೆ. ಅಲ್ಲದೆ, ಬಸ್ ನಿಲ್ದಾಣದಲ್ಲಿ ರಿಸರ್ವೇಶನ್ ಪದ್ಧತಿಯನ್ನು ಅಳವಡಿಸಿರುವುದಿಲ್ಲ. ಆದಕಾರಣ ರೋಣದಿಂದ ಬೆಂಗಳೂರಿಗೆ ಹೈಟೆಕ್ ಬಸ್ ಸಂಚಾರದ ಸೌಲಭ್ಯ ಪ್ರಾರಂಭಿಸುವವರೆಗು ಬೆಂಗಳೂರಿಗೆ ಬರುವಂಥ ಬಸ್ಸಿನಲ್ಲಿ ರೋಣ ಬಸ್ ಡಿಪೋವಿನಿಂದ 6-8 ಆಸನಗಳ ರಿಸರ್ವೇಶನ್ ವ್ಯವಸ್ಥೆಯನ್ನಾದರೂ ಮಾಡಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸರ್ಕಾರ ನೀಡಿರುವ ಉತ್ತರದ ಬಗ್ಗೆ ಸಂತೋಷವನ್ನು ವ್ಯಕ್ತಮಾಡಿದ್ದಾರೆ. ಅವರು ಒಂದು ಹೈಟೆಕ್ ಬಸ್‌ನ ಸೌಲಭ್ಯವನ್ನು ಕಲ್ಪಿಸಿಕೊಡಿ ಎಂದು ಕೇಳಿದ್ದಾರೆ. ಅಲ್ಲಿಯ ಪ್ರಯಾಣಿಕರ ಒತ್ತಡ ಮತ್ತು ಇದು ತಾಲ್ಲೂಕು ಕೇಂದ್ರವಾಗಿರುವುದರಿಂದ ಇಲ್ಲಿಂದ ಹೈಟೆಕ್ ಬಸ್‌ನ ಸಂಚಾರ ಯೋಗ್ಯವಾಗಿ ನಡೆಯಬಹುದೇ ಎಂಬ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತಕ್ಷಣವೇ ಅವರ ಬೇಡಿಕೆಗೆ ಸ್ಪಂದಿಸುತ್ತೇನೆ. ಬಾಗಲಕೋಟೆ ಮತ್ತು ಬಾದಾಮಿ ಬಸ್ಸುಗಳಿಗೆ ರಿಸರ್ವೇಶನ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಗದಗ್ ವಿಭಾಗದ ಕಛೇರಿಯಲ್ಲಿ 362 ಬಸ್ಸುಗಳು ಇದೆಯೆಂದು ಹೇಳಿದ್ದಾರೆ. ಗದಗ್ ಕೆಲವು ವರ್ಷಗಳ ಹಿಂದೆ ಹುಬ್ಬಳ್ಳಿ ವಿಭಾಗದಿಂದ ಪ್ರತ್ಯೇಕವಾಯಿತು. ಆರೀತಿ ಪ್ರತ್ಯೇಕಗೊಳ್ಳುವ ಮೊದಲು ಎಷ್ಟು ಬಸ್ಸುಗಳು ಇತ್ತು? ಈಗ ಎಷ್ಟು ಇದೆ? ಎಂಬ ಬಗ್ಗೆ

ಹೇಳಬೇಕು. ರೋಣ ಬಸ್ ಡಿಪೋ ಏನಿದೆ ಅದು 1956ರ ನಂತರದಲ್ಲಿ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೆ ಕೇವಲ 87 ಡ್ಯೂಲ್ ಇರಲು ಕಾರಣವೇನು? ಅದು ಬಹಳ ದೊಡ್ಡದಾದ ತಾಲ್ಲೂಕು. ರೋಣದ 25 ಹಳ್ಳಿಗಳು ನನ್ನ ಭಾಗಕ್ಕೂ ಬರುತ್ತದೆ. ಇಷ್ಟು ದೊಡ್ಡದಾದ ತಾಲ್ಲೂಕಿನಲ್ಲಿ ಬಹಳ ದೂರದವರೆಗೆ ಬಸ್ಸುಗಳು ಹೋಗುತ್ತವೆ. 120, 130, ಶೆಡ್ಯೂಲ್‌ಗಳಿದ್ದಾಗ 87ಕ್ಕೆ ಸೀಮಿತವಾಗಿ ಉಳಿಯಲು ಕಾರಣವೇನು?

ಶ್ರೀ ಸಿ. ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಹಿಂದಿನ ಮಾಹಿತಿ ತಕ್ಷಣ ನನ್ನ ಮುಂದೆ ಇಲ್ಲ. ಆದರೆ ಹಳೆಯ ಬಸ್ ಘಟಕವಿದ್ದಾಗ ಬಸ್ಸುಗಳೆಷ್ಟು ಇತ್ತು ಎಂಬ ಬಗ್ಗೆ ಮಾಹಿತಿ ಕೇಳಿದ್ದಾರೆ ಅದಕ್ಕೆ ಪ್ರತ್ಯೇಕವಾಗಿ ಅವರಿಗೆ ಮಾಹಿತಿ ಕಳಿಸಿಕೊಡುತ್ತೇನೆ. ಆದರೆ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಾಗಿ ಪರಿವರ್ತನೆಯಾದನಂತರ ಇಲ್ಲಿ ಹೆಚ್ಚಾಗಿ ಬಸ್ಸುಗಳನ್ನು ಒದಗಿಸಿಕೊಟ್ಟಿದ್ದೇವೆ. ಈ ವರ್ಷ ಮತ್ತು ಮುಂದಿನ ವರ್ಷದಲ್ಲಿ ಹೆಚ್ಚಿನ ಮಾರ್ಗಗಳಲ್ಲಿ ಬಸ್ ಸಂಚಾರವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಹೊಸ ಬಸ್ಸುಗಳನ್ನು ಸಹ ಕೊಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ 2400 ವಾಹನಗಳು ಇದೆ. ದಿನನಿತ್ಯ ವಾಹನಗಳ ಸಂಖ್ಯೆಯನ್ನು ಜಾಸ್ತಿ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ಆ ಭಾಗಕ್ಕೆ ಬೇಕಾಗಿರುವ ಬಸ್ಸಿನ ಸೌಲಭ್ಯ ಕಲ್ಪಿಸುವ ಬಗ್ಗೆ ಪ್ರತ್ಯೇಕವಾದ ಬೇಡಿಕೆ ಇಟ್ಟಲ್ಲಿ ಅವರ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ರೋಣ ಶಾಸಕರು ಹೈಟೆಕ್ ಬಸ್‌ನ ಬಗ್ಗೆ ಕೇಳಿದಾಗ, ಜನರಿಂದ ಬೇಡಿಕೆ ಇಲ್ಲ ಆ ಕಾರಣ ಇದರ ಬಗ್ಗೆ ವಿಚಾರ ಮಾಡಿ ಮಾಡುವುದಾಗಿ ಮಾನ್ಯ ಸಾರಿಗೆ ಸಚಿವರು ಹೇಳಿದರು. ತಾವು ರೋಣ, ಗದಗ್, ಮುಂಡರಗಿ ಮುಖಾಂತರ ಹೈಟೆಕ್ ಬಸ್‌ನ್ನು ಬಿಟ್ಟರೆ ಸಾಕಷ್ಟು ಜನರು ಸಿಗುತ್ತಾರೆ. ಮೂರು ತಾಲ್ಲೂಕು ಮುಖ್ಯ ಕೇಂದ್ರಗಳಿಗೆ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್ : ಹೈಟೆಕ್ ಬಸ್ಸನ್ನು ಅಲ್ಲಿ ಬಿಡಬಾರು ಎಂಬ ವಿಚಾರ ನನ್ನ ಮನ್ನಸ್ಸಿನಲ್ಲಿಲ್ಲ. ಆ ಭಾಗದ ಶಾಸಕರಿಗೆ, ಜನರಿಗೆ ಗದಗ್ ಅಥವಾ ರೋಣದಿಂದ ಬೆಂಗಳೂರಿಗೆ ಬರುವಂಥ ವ್ಯವಸ್ಥೆಗೆ ಈ ಸೌಕರ್ಯವನ್ನು ಒದಗಿಸಿಕೊಡುವ ಬೇಡಿಕೆಯನ್ನು ಈಡೇರಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರಕೊಡಲು ಕೃಷಿ ಸಚಿವರು ಇರಬೇಕಾಗುತ್ತದೆ. ಆದರೆ ಕೃಷಿ ಸಚಿವರು ಇಲ್ಲಿ ಇಲ್ಲ. ಇದರ ಬಗ್ಗೆ ಸಮಗ್ರವಾಗಿ ಅವರು ಉತ್ತರವನ್ನು ಕೊಡುವುದಿದ್ದರೆ ಸಚಿವರು ಬಂದಾಗಲೇ ಕೊಡಲಿ. ಈ ವಿಷಯದ ಬಗ್ಗೆ ಈಗಾಗಲೇ ಚರ್ಚೆ ನಡೆಯುತ್ತಿದೆ. ಆದ್ದರಿಂದ ಸಮಗ್ರವಾಗಿ ಉತ್ತರವನ್ನು ಕೊಡುವಾಗಲೇ ಇದರ ಬಗ್ಗೆ ಉತ್ತರವನ್ನು ಕೊಡಲಿ.

ಬಾಗಲಕೋಟೆ ಜಿಲ್ಲೆಗೆ ಸಹಕಾರ ಬ್ಯಾಂಕ್ ಪ್ರಾರಂಭಿಸುವುದು

118(1278) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?